**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 369/2022</u>**

**ಚಾ.ಸಾ - 1**

**ಪ್ರಾ.ಸಾ- 4**

**ಸಾಕ್ಷಿಗೆ ದಿನಾಂಕ 19-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಂಗಮೇಶ ಅಂಗಡಿ |
| ತಂದೆಯ ಹೆಸರು | ಃ | ಗುರಪ್ಪ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | DCRB ಕಲ್ಬುರ್ಗಿ ಜಿಲ್ಲೆ |
| ವಾಸಸ್ಥಳ | ಃ | ಕಲ್ಬುರ್ಗಿ |

**<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ:</u>**

ನಾನು 06-03-2020 ರಿಂದ 30-01-2023ವರೆಗೆ ಜೇವರ್ಗಿ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 17-03-2022ರಂದು ರಾತ್ರಿ 11 ಗಂಟೆ ಸುಮಾರಿಗೆ ರಾತ್ರಿ ಗಸ್ತು ಕರ್ತವ್ಯ ಕುರಿತು ಠಾಣಾ ಸಿಬ್ಬಂದಿಯಾದ ಚಾಸಾ-4 ಮತ್ತು 5ರವರನ್ನು ಠಾಣಾ ಜೀಪ್ ನಂ.ಕೆಎ-32 ಜಿ-671ನೇದ್ದರಲ್ಲಿ ಚೆಕಿಂಗ್ ಕುರಿತು ಠಾಣೆಯಿಂದ ಹೊರಟಿದ್ದೆವು.

ದಿನಾಂಕ 18-03-2022 ರಂದು ಮಧ್ಯರಾತ್ರಿ 1 ಗಂಟೆಗೆ ಸಿಂದಗಿ ಕ್ರಾಸ್ ಹತ್ತಿರ ಇದ್ದಾಗ ಜೇವರ್ಗಿ ಪಟ್ಟಣದ ರದ್ದೆವಾಡಗಿ ಪೆಟ್ರೋಲ್ ಬಂಕ್ ಹತ್ತಿರ ರಮೇಶ ತೇಲ್ಕೂರ ಎನ್ನುವವರು ಅನಧಿಕೃತವಾಗಿ ಮದ್ಯದ ಪೌಚುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ ಎಂದು ಬಾತಿ ಬಾತ್ಮಿ ಬಂದಿರುತ್ತದೆ. ಸದರಿ ಬಾತ್ಮಿ ವಿಷಯವನ್ನು ಚಾಸಾ-4 ಮತ್ತು 5ರವರಿಗೆ ತಿಳಿಸಿರುತ್ತೇನೆ. ಚಾಸಾ-4 ಮತ್ತು 5ರವರಿಗೆ ಪಂಚರನ್ನು ಕರೆಯಿಸಲು ಕಳುಹಿಸಿರುತ್ತೇನೆ. ಚಾಸಾ-4 ಮತ್ತು 5ರವರು ಇಬ್ಬರು ಪಂಚರಾದ ಚಾಸಾ-2 ಮತ್ತು 3ರವರನ್ನು ಕಡೆದುಕೊಂಡು ಬಂದಿರುತ್ತಾರೆ. ಬಾತ್ಮಿ ಬಂದ ವಿಷಯವನ್ನು ತಿಳಿಸಿದಾಗ ಅವರು ಪಂಚರಾಗಲು ಒಪ್ಪಿ ಕೊಂಡಿರುತ್ತಾರೆ. ನಂತರ ಮೇಲಾಧಿಕಾರಿಗಳಿಗೆ ದಾಳಿ ಮಾಡಲು ಹೋಗುವ ವಿಷಯ ತಿಳಿಸಿರುತ್ತೇನೆ. ನಂತರ ಮದ್ಯ ರಾತ್ರಿ 1-30 ಗಂಟೆಗೆ ದಾಳಿ ಮಾಡುವ ಕುರಿತು ಬಾತ್ಮಿ ಬಂದ ಸ್ಥಳದ ಕಡೆಗೆ ಹೊರಟೆವು. ಮದ್ಯ ರಾತ್ರಿ

2 ಗಂಟೆಗೆ ಜೇವರ್ಗಿ ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಜೀಪನ್ನು ನಿಲ್ಲಿಸಿ ಪಂಚರು ಹಾಗೂ ಸಿಬ್ಬಂದಿಯೊಂದಿಗೆ ನಡೆದುಕೊಂಡು ಹೋದೆವು. ಬಾತ್ಮಿ ಬಂದ ಸ್ಥಳದಲ್ಲಿ ಲೈಟಿನ ಬೆಳಕಿನಲ್ಲಿ ಅಕ್ರಮವಾಗಿ ಮದ್ಯದ ಪೌಚುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದನು. ಅದನ್ನು ಖಚತಪಡಿಸಿಕೊಂಡು ಚಾಸಾ-2 ರಿಂದ 4ರವರೊಂದಿಗೆ ದಾಳಿ ಮಾಡಿದೆವು. ದಾಳಿ ಮಾಡಿದಾಗ ಮದ್ಯವನ್ನು ಖರೀದಿಸಲು ಬಂದಿದ್ದವರು ಓಡಿಹೋದರು. ಮದ್ಯ ಮಾರಾಟ ಮಾಡುತ್ತಿದ್ದವನು ಓಡಿಹೋದನು ಆತನನ್ನು ಬೆನ್ನತ್ತಿ ಹಿಡಿದು ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರು ರಮೇಶ ತೇಲ್ಕೂರ ಎಂದು ತಿಳಿಸಿದನು. ಸದರಿ ಮದ್ಯದ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಆತ ತನ್ನ ಹತ್ತಿರ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿ ಸದರಿ ಮದ್ಯದ ಪೌಚುಗಳನ್ನು ಶಿವರಾಜ ಗುತ್ತೆದಾರರವರಿಂದ ತಂದಿದ್ದೇನೆ ಎಂದು ತಿಳಿಸಿರುತ್ತಾನೆ.

ಪಂಚರ ಸಮಕ್ಷಮ ಮದ್ಯದ ಪೌಚುಗಳನ್ನು ಪರಿಶೀಲನೆ ಮಾಡಿದೆವು. 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ವಿಸ್ಕಿಯ 48 ಮದ್ಯದ ಪೌಚುಗಳು, 180 ಎಂ.ಎಲ್.ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 40 ಮದ್ಯದ ಪೌಚುಗಳು, 90  ಎಂ.ಎಲ್.ನ ಬ್ಯಾಗ್ ಪೈಪರ್ 52 ಮದ್ಯದ ಪೌಚುಗಳು , 180 ಎಂ.ಎಲ್.ನ ಬ್ಯಾಗ್ ಪೈಪರ್ 30 ಮದ್ಯದ ಪೌಚುಗಳು, 180 ಎಂ.ಎಲ್.ನ ಎಂ.ಸಿ.ಡಾವೆಲ್ಸ್ ಕಂಪನಿಯ 40 ರಮ್ ನ ಪೌಚುಗಳು, 180 ಎಂ.ಎಲ್.ನ ಎಂ.ಸಿ.ಡಾವೆಲ್ಸ್ ಕಂಪನಿಯ 20 ವಿಸ್ಕಿಯ ಪೌಚುಗಳು, 500 ಎಂ.ಎಲ್.ನ ಕಿಂಗಫಿಷರ್ 20 ಟಿನ್ನುಗಳು ಇದ್ದವು ಅವುಗಳ ಒಟ್ಟು ಬೆಲೆ 23,356/- ಇತ್ತು.

ಸದರಿ ಪೌಚುಗಳನ್ನು ಹಾಗೂ ಟಿನ್ನುಗಳನ್ನು ಜಪ್ತಿ ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿ ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತೇವೆ. ಪಂಚನಾಮೆಯನ್ನು ಮದ್ಯರಾತ್ರಿ 2 ಗಂಟೆಯಿಂದ 3 ಗಂಟೆವರೆಗೆ ಚಾರ್ಜರ್ ಬೆಳಕಿನಲ್ಲಿ ಜರುಗಿಸಿರುತ್ತೇನೆ.

ಸಾಕ್ಷಿಗೆ ನಿಪಿ-1 ಜಪ್ತಿಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-1(ಸಿ) ಗುರುತಿಸಲಾಯಿತು.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿ-3 ಎಂದು ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ಎಂ.ಒ.1 ರಿಂದ 250 ಮದ್ಯದ ಪೌಚುಗಳನ್ನು ಹಾಗೂ ಟಿನ್ನುಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ.ವೈ. ವಕೀಲರಿಂದಃ</u>**

ಇಬ್ಬರು ಪಂಚರು ಒಟ್ಟಿಗೆ ಬಂದಿರುತ್ತಾರೆ. ನೀವು ನಿಲ್ಲಿಸಿದಂತಹ ಜೀಪಿನಿಂದ ಘಟನಾ ಸ್ಥಳ ಎಷ್ಟು ದೂರ ಇದೆ ಎಂದರೆ ಅಂದಾಜು 100 ಮೀಟರ್ ದೂರ ಇದೆ ಎಂದು ಉತ್ತರಿಸುತ್ತಾರೆ. ಯಾವ ಯಾವ ಪೌಚುಗಳಲ್ಲಿ ಇಷ್ಟಿಷ್ಟು ಮದ್ಯ ಇತ್ತು ಎಂದು ಯಾವುದಾದರೂ ಸಾಧನದಿಂದ ಅಳತೆ ಮಾಡಿದ್ದೀರಾ ಎಂದರೆ

ಪೌಚುಗಳ ಹಾಗೂ ಟಿನ್ನುಗಳ ಮತ್ತು ಬಾಟಲಿಗಳ ಮೇಲೆ ಅದರಲ್ಲಿ ಎಷ್ಟು ಪ್ರಮಾಣದ ಮದ್ಯ ಇತ್ತು ಎಂದು ಬರೆಯಲಾಗಿತ್ತು ಅದರಂತೆ ನಮೂದು ಮಾಡಿರುತ್ತೇನೆ. ಮದ್ಯದ ಪೌಚುಗಳು ಯಾವ ಇಸವಿಗೆ ಮತ್ತು ಯಾವ ಬ್ಯಾಚಿಗೆ ಸಂಬಂಧಪಟ್ಟಿವೆ ಎಂದು ನಿಮ್ಮ ದೂರಿನಲ್ಲಿ ಬರೆದಿದ್ದೀರಾ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದ ಮುಂದಿರುವಂತಹ ಪೌಚುಗಳನ್ನು ಸಾಕಷ್ಟು ಪ್ರಕರಣಗಳಲ್ಲಿ ಜಪ್ತಿಪಡಿಸಿಕೊಂಡಿರುತ್ತೀರಿ ಎಂದರೆ ಜಪ್ತಿಪಡಿಸಿಕೊಂಡ ನಂತರ FSL ಗಾಗಿ ಕಳುಹಿಸಿಕೊಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ರದ್ದೆವಾಡಗಿ ಪೆಟ್ರೋಲ್ ಬಂಕ್ ಹತ್ತಿರ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ಪಂಚರನ್ನು ಬಿಟ್ಟು ಬೇರೆ ವ್ಯಕ್ತಿಗಳನ್ನು ಪಂಚನಾಮೆಗೆ ಸಹಿ ಮಾಡಲು ಕೇಳಿದ್ದೀರಾ ಎಂದರೆ ಕೇಳಿದ್ದೇನೆ ಆದರೆ ಅವರು ನಿರಾಕರಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನೀವು ಯಾರು ಯಾರಿಗೆ ಕೇಳಿರುತ್ತೇನೆ ಎಂದು ಅವರ ಹೇಸರು ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಈ ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆರೋಪಿತರ ಮೇಲೆ ಸುಳ್ಳು ದೂರು ನೀಡಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಠಾಣಾ ಅಂಕಿಅಂಶಕ್ಕಾಗಿ ಆರೋಪಿತರ ಮೇಲೆ ಸುಳ್ಳು ದೂರು ನೀಡಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ